ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಸೊಳ್ಳೆಗಳು ರಕ್ತ ಹೀರುತ್ತವೆ. ರಾಜಕಾರಣಿಗಳು?*



ಅವರೂ ಹೀರುವುದೇ – ರಕ್ತರನ್ನು, ಅನುರಕ್ತರನ್ನು, ಸುರಕ್ತರನ್ನು, ವಿರಕ್ತರನ್ನು..

ಹೆಚ್.ಸಿ. ಭಾಗ್ಯಕುಮಾರ್, ಬೆಂಗಳೂರು

*ಕಾಲದಲ್ಲಿಯಾದರೂ ನಮ್ಮ ದೇಶ ಅಮೆರಿಕಾಗಿಂತ ಕೆಲವು ಗಂಟೆಗಳು ಮುಂದಿದೆಯಲ್ಲವೆ?*

ಕಾಲವಾಗುವುದರಲ್ಲೂ ನಾವೇ ಮುಂದೆ. ನಮ್ಮ ಆಯಸ್ಸು ಸರಾಸರಿ 68, ಅವರದು 80.

ಬಾ.ರಂ. ಸುರೇಶ, ಶಿವಮೊಗ್ಗ

*ಕನಸಿನಲ್ಲಿ ಟೀ ಮಾರುವವನ ಹಾಗೆ ಕಂಡುಬಂದೆ. ಅದರಿಂದ ಮುಂದೆ ಏನು ಸಂಭವಿಸಬಹುದು ಶಿವಾ?*

ಮಹಾನ್ ಅದೃಷ್ಟ ನಿಮ್ಮದು. ಶೀಘ್ರದಲ್ಲೇ ದೇಶದ ಪ್ರಧಾನಿ ಆಗುತ್ತೀರಿ – ಕನಸಿನಲ್ಲಿ.

ಕೆ.ಹೊನ್ನಪ್ಪ, ಕ್ಯಾತಸಂದ್ರ

*ರಾಜಕಾರಣಿಗಳು ಏಕೆ ಕೋಟಿ ಕೋಟಿ ಹಗಲು ದರೋಡೆ ಮಾಡುತ್ತಾರೆ?*




ಅವರಿಗೆ ಅಂತಹ ತಾರತಮ್ಯವೇನಿಲ್ಲ. ಅವಕಾಶವಿದ್ದರೆ ರಾತ್ರಿ ದರೋಡೆಯೂ ಮಾಡುತ್ತಾರೆ.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಸಾಲ ಮಾಡಿಯಾದರೂ ತುಪ್ಪ ತಿನ್ನುವ ಜಾಯಮಾನದವರೇ ದೇಶದಲ್ಲಿ ಜಾಸ್ತಿಯಾಗಿದ್ದಾರಲ್ಲಾ...?*

ಸಾಲ ಮನ್ನಾ ಆಗುವ ಖಾತ್ರಿ ಇದೆಯಂತೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

*ಕಾಡುಮೇಡಲೆದು, ವೃದ್ಧರು, ಮಹಿಳೆಯರಿದ್ದ ರಾಜ್ಯವಾಳಿದ ಪಾಂಡವರಿಗಿಂತ ರಾಜನಾಗಿ ಮೆರೆದು ಮಡಿದ ಕೌರವ ಪುಣ್ಯವಂತನಲ್ಲವೆ?*

ಊಹೂಂ. ನೆಮ್ಮದಿಯಿಲ್ಲದ ಪುಣ್ಯ ಪುಣ್ಯವಲ್ಲ.

ಆನಂದ್ ಕುಮಾರ್, ಚಿತ್ರದುರ್ಗ

*ದಟ್ಟ ಬೇಸಿಗೆಗೂ, ಕೊರೆವ ಚಳಿಗೂ ಅಂಜದ ಗಂಡು ಯಾರು?*

ಬೇಸಿಗೆಯಲ್ಲಿ ಬೀರ್, ಚಳಿಯಲ್ಲಿ ರಮ್ ಕುಡಿಯುವವನು.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಬಡತನದಲ್ಲಿ ಬೆಳೆದು ದೊಡ್ಡ ಹುದ್ದೆ ಪಡೆದವರಿಗೂ, ಸಿರಿತನದಲ್ಲಿ ಬೆಳೆದು ದೊಡ್ಡ ಹುದ್ದೆ ಪಡೆದವರಿಗೂ ವ್ಯತ್ಯಾಸವೇನು?*

ಆ ಪೀಠವೂ ನಮ್ಮವರ ಜ್ಞಾನಪೀಠದಂತೆಯೇ; ಕೆಲವು ಪಡೆದದ್ದು, ಕೆಲವು ಕೊಂಡದ್ದು.

ಪೇಂಟರ್ ಪಾಪು, ಸಂತೇಮರಹಳ್ಳಿ

*ಕಣ್ಣಿಲ್ಲದಿದ್ದರೆ ದುಡ್ಡು ಕಾಣಬಹುದು. ಆದರೆ ದುಡ್ಡಿಲ್ಲದಿದ್ದರೆ ಕಣ್ಣು ಕಾಣಲ್ಲ. ಯಾಕೆ?*

ನೋಟಹೀನರಿಗೆ ಸಿಗುವ ನೆರವು ನೋಟುಹೀನರಿಗೆ ಸಿಗುವುದಿಲ್ಲವಲ್ಲ.

ಅಕ್ಷಯ ಜೈನ್, ಶ್ರವಣಬೆಳಗೊಳ

*ಈ ಚಂದದ 'ಉತ್ತರ ಮಹಲ್' ನಿಮ್ಮ ಬದುಕಿಗೆ ನೆಲೆಯಾಗಿದೆಯಾ ಸಾರ್?*

ಊಹೂಂ. ನನ್ನ ಹಾಸ್ಯಕಾರಂಜಿಯ ಸೆಲೆಯಾಗಿದೆ.

ಎಸ್.ಡಿ. ರಾಮಚಂದ್ರಪ್ಪ, ತುರುವನೂರು

*ಪ್ರೇಮವಿವಾಹಕ್ಕೂ, ಪೋಷಕರ ಒಪ್ಪಿಗೆಯ ವಿವಾಹಕ್ಕೂ ವ್ಯತ್ಯಾಸವೇನು?*

ಅಲ್ಲಿ ನೋಂದಣಿ; ಇಲ್ಲಿ **known** ಧಣಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಪರಾವಲಂಬಿ ಜೀವಿಗಳಿಗೂ, ಬಾಸ್‌ಗೆ ಚಮಚಾಗಿರಿ ಮಾಡುವ ಚೇಲಾಗಳಿಗೂ ಏನು ಸಾಮ್ಯತೆ?*

ಎರಡೂ ಲಲಿತ್ ಮೋದಿಯಂತೆ; ಸತ್ವ ಹೀರುವವರೆಗೆ ಮಾತ್ರ ಜೊತೆಗಿರುತ್ತವೆ.

ಎಂ.ಎ. ಕುಮಾರ್, ಬೆಂಗಳೂರು

*ಹೆಣ್ಣು ಜೀವನದಲ್ಲಿ ಅತಿ ಹೆಚ್ಚು ಸಮಯವನ್ನು ಎಲ್ಲಿ ಕಳೆಯುತ್ತಾಳೆ?*

'ತಿನ್ನೋ, ಕುಡಿಯೋ, ಏಯ್! ಅದು ಮಾಡಬೇಡ; ನಿಮಗೆ ಬುದ್ಧೀನೇ ಇಲ್ಲ' ಅನ್ನುತ್ತಾ ಗಂಡ ಮಕ್ಕಳ ಹಿಂದೆ ಹಿಂದೆ.

## ಬಹುಮಾನಿತ ಪ್ರಶ್ನೆ

ಕುಮಾರ ಚಲವಾದಿ, ಹೊಳೆನರಸಿಪುರ

ದೇವರು ನಿದ್ದೆಗಣ್ಣಿನಲ್ಲಿ ಸೃಷ್ಟಿಸಿದ್ದು ಹೆಣ್ಣನ್ನೋ, ಗಂಡನ್ನೋ?

ಹೆಣ್ಣನ್ನೇ; ನಿದ್ರೆಗಣ್ಣಿನಲ್ಲಿ ಸರಿಯಾಗಿ ಸೃಷ್ಟಿಸಲಿಲ್ಲವಾದ್ದರಿಂದಲೇ ಅದಕ್ಕೆ ಆಗಾಗ್ಗೆ ಪೆಡಿಕ್ಯೂರು, ಫೇಶಿಯಲ್ಲು, ಮೇಕಪ್ಪು...

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಮರಳುಗಾಡಿನಲ್ಲಿ ಮನೆ ಕಟ್ಟುವವರನ್ನು ಏನೆನ್ನಬೇಕು?*

ಮರುಳ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಮನುಷ್ಯನ ಪ್ರಾಮಾಣಿಕತೆಯನ್ನು ಅಳೆಯುವ ಯಂತ್ರವೇನಾದರೂ ಇದ್ದಿದ್ದರೆ?*

ಪುಡಾರಿಗಳು ಅದನ್ನು ಕರಪ್ಟ್ ಮಾಡುವ ತಂತ್ರವನ್ನು ಕಂಡುಹಿಡಿಯುತ್ತಿದ್ದರು.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

*ಗೌರವಾರ್ಥವಾಗಿ ಅಂಚೆ ಚೀಟಿ ತಂದು ಅದರ ಮೇಲೆ ಅಳಿಸಲಾಗದ ಕಪ್ಪು ಠಸ್ಸೆ ಒತ್ತುವುದು ಅಗೌರವವಲ್ಲವೆ?*




ಶ್ರೇಷ್ಠರಿಗೆ ವಿಮೆ ಮಾಡಿಸುವುದು ಗೌರವದ ಸಂಕೇತ. ಠಸ್ಸೆ ಅವರ ಚಿತ್ರವೂ ಕಳುವಾಗದಿರಲು ಮಾಡಿದ ವಿಮೆ.

ಜಿ.ಆರ್. ಉಮಾದೇವಿ, ಶಿವಮೊಗ್ಗ

*ಧೂಮಪಾನ, ಮದ್ಯಪಾನ ಪ್ರಜೆಗಳ ಆರೋಗ್ಯಕ್ಕೆ ಹಾನಿಕರ ಎನ್ನುವ ಬದಲು ಅವನ್ನು ನಿಷೇಧಿಸಬಹುದಲ್ಲ?*

ಆಗದು. ನಿಷೇಧಿಸಿದರೆ ಸರ್ಕಾರದ ಆರೋಗ್ಯಕ್ಕೆ ಹಾನಿಕರ!

ಆರ್.ಸಿ. ಪರಶುರಾಮ್, ಶಿಕಾರಿಪುರ

*ಅಳುವ ಗಂಡಸನ್ನು ನಂಬಬಾರದಂತೆ. ಹಾಗಾದರೆ ಗಂಡಸರು ದುಃಖವನ್ನು ವ್ಯಕ್ತಪಡಿಸುವುದು ಹೇಗೆ?*

ಗಡ್ಡ ಬೆಳೆಸಿ, ಮುಕೇಶ್, ಸೈಗಲ್, ತಲತ್, ರಫಿ ಹಾಡುಗಳನ್ನು ಹಾಡುವುದರ ಮೂಲಕ.

■ ರಾಮ್